# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 120 |
| 2 | ಸದಸ್ಯರ ಹೆಸರು | ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3 | ಉತ್ತರಿಸಬೇಕಾದ ದಿನಾಂಕ | 16.02.2022 |
| 4 | ಉತ್ತರಿಸುವ ಸಚಿವರು | ಕಂದಾಯ ಸಚಿವರು |

<table>
<tr><th>ಕ್ರ ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಳೆದ 3 ವರ್ಷ ಗಳಿಂದ ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆ ಯಲ್ಲಿ ಪೋಡಿಗಾಗಿ ಸಲ್ಲಿಕೆ ಯಾಗಿರುವ ಅರ್ಜಿಗಳೆಷ್ಟು; ಇದರಲ್ಲಿ ಎಷ್ಟು ಅರ್ಜಿ ಗಳನ್ನು ವಿಲೇವಾರಿ ಮಾಡ ಲಾಗಿದೆ; ಬಾಕಿ ಇರುವ ಅರ್ಜಿ ಗಳೆಷ್ಟು; ಬಾಕಿ ಇರುವ ಅರ್ಜಿ ಗಳನ್ನು ಯಾವಾಗ ವಿಲೇ ಮಾಡಲಾಗುವುದು; (ಹೋಬಳಿವಾರು ಮತ್ತು ತಾಲ್ಲೂಕುವಾರು ವಿವರ ನೀಡುವುದು)</td><td>ಕಳೆದ 3 ವರ್ಷಗಳಿಂದ ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಗಳಲ್ಲಿ ತತ್ಕಾಲ್ ಪೋಡಿಗಾಗಿ ಸ್ವೀಕೃತವಾದ ಅರ್ಜಿಗಳ ಪ್ರಗತಿ ವಿವರ ಈ ಕೆಳಗಿನಂತಿರುತ್ತದೆ.
<table>
<tr><th>ಜಿಲ್ಲೆಗಳ ಹೆಸರು</th><th>ಪ್ರಾ. ಶಿಲ್ಕು</th><th>ಸ್ವೀಕೃತಿ</th><th>ಒಟ್ಟು</th><th>ವಿಲೇ</th><th>ಬಾಕಿ</th></tr>
<tr><td>ಬೆಂಗಳೂರು ಗ್ರಾಮಾಂತರ</td><td>3156</td><td>11968</td><td>15124</td><td>10603</td><td>4521</td></tr>
<tr><td>ರಾಮನಗರ</td><td>3682</td><td>15017</td><td>18699</td><td>11638</td><td>7061</td></tr>
</table>
ಕಳೆದ 3 ವರ್ಷಗಳಿಂದ ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಯಲ್ಲಿ ಪೋಡಿಗಾಗಿ ಸ್ವೀಕೃತವಾದ ಮತ್ತು ವಿಲೆಯಾದ ಹಾಗೂ ಬಾಕಿಯಿರುವ ಅರ್ಜಿಗಳ ಹೋಬಳಿವಾರು/ತಾಲ್ಲೂಕುವಾರು ವಿವರವನ್ನು ಅನುಬಂಧದಲ್ಲಿ ನೀಡಿದೆ.</td></tr>
<tr><td>ಆ)</td><td>ಪೋಡಿಗಾಗಿ ಸಲ್ಲಿಕೆಯಾಗುವ ಅರ್ಜಿಗಳನ್ನು ಇತ್ಯರ್ಥ ಪಡಿಸಲು ಕಾಲಮಿತಿ ಇದೆಯೇ; ಕಾಲ ಮಿತಿಯೊಳಗೆ ಅರ್ಜಿಗಳನ್ನು ವಿಲೇ ವಾರಿ ಮಾಡದ ಎಷ್ಟು ಜನ ಅಧಿಕಾರಿಗಳ ವಿರುದ್ಧ ಸಿ.ಸಿ.ಎ. ನಿಯಮಾವಳಿ ಅನ್ವಯ ಕ್ರಮ ಕೈಗೊಳ್ಳ ಲಾಗಿದೆ;</td><td>ತತ್ಕಾಲ್ ಪೋಡಿಗಾಗಿ ಸಲ್ಲಿಕೆಯಾಗಿರುವ ಅರ್ಜಿಗಳಲ್ಲಿ ಯಾವುದೇ ಸಮಸ್ಯೆಗಳು/ತಕರಾರುಗಳು ಇಲ್ಲದಿದ್ದಲ್ಲಿ 45 ದಿನಗಳಲ್ಲಿ ವಿಲೇವಾರಿ ಮಾಡಬೇಕಾಗಿರುತ್ತದೆ. ಒಂದು ವೇಳೆ ಪಹಣಿ ತಿದ್ದುಪಡಿ/ತಕರಾರು/ದಾಖಲೆಗಳು ನಶಿಸಿರುವುದು ಇತ್ಯಾದಿ ತೊಂದರೆಗಳಿದ್ದಲ್ಲಿ ಸದರಿ ಅರ್ಜಿಯ ವಿಲೇವಾರಿ ಮಾಡಲು 120 ದಿನಗಳ ಅವಧಿ ನಿಗಧಿಪಡಿಸಲಾಗಿದೆ. ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಯಲ್ಲಿ ಕಳೆದ 3 ವರ್ಷಗಳಲ್ಲಿ ಪೋಡಿ ಪ್ರಕರಣಗಳ ವಿಲೇವಾರಿಯಲ್ಲಿ ವಿಳಂಬ ಮಾಡಿರುವ ಮತ್ತು ನಿಗಧಿತ ಗುರಿಯಂತೆ ಪ್ರಗತಿ ಸಾಧಿಸಲು ವಿಫಲರಾಗಿರುವ ಒಟ್ಟು 12 ಅಧಿಕಾರಿ/ನೌಕರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗಿದೆ.</td></tr>
<tr><td>ಇ)</td><td>ಪೋಡಿಗಾಗಿ ಬಾಕಿ ಇರುವ ಅರ್ಜಿಗಳನ್ನು ತ್ವರಿತಗತಿ ಯಲ್ಲಿ ವಿಲೇವಾರಿ ಮಾಡಲು ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ;</td><td>ಪೋಡಿಗಾಗಿ ಬಾಕಿ ಇರುವ ಅರ್ಜಿಗಳನ್ನು ತ್ವರಿತವಾಗಿ ವಿಲೇವಾರಿ ಮಾಡಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.<br>1) ಇಲಾಖೆಯಲ್ಲಿ ಅಳತೆ ಕೋರಿ ಸ್ವೀಕೃತವಾಗುವ ಎಲ್ಲಾ ಅರ್ಜಿಗಳನ್ನು ಮೋಜಿಣಿ ತಂತ್ರಾಂಶದ ಮುಖಾಂತರ ಆನ್‌ಲೈನ್‌ನಲ್ಲಿ ಸ್ವೀಕರಿಸಲಾಗುತ್ತಿದ್ದು, ತಂತ್ರಾಂಶದ ಪ್ರತಿ ಹಂತದಲ್ಲಿಯೂ FIFO (ಸರದಿ ಸಾಲಿನಂತೆ) ಪದ್ಧತಿಯನ್ನು ಅಳವಡಿಸಲಾಗಿದೆ, ಸರದಿ ಸಾಲಿನಂತೆ ಅಳತೆಗಾಗಿ ಭೂಮಾಪಕರಿಗೆ ತಂತ್ರಾಂಶದ ಮೂಲಕ ಆನ್‌ಲೈನ್‌ನಲ್ಲಿ ವಿತರಿಸಲಾಗುತ್ತಿದೆ. ಪ್ರಕರಣದಲ್ಲಿ ಅಳತೆಯಾದ ನಂತರ ಭೂಮಾಪಕರು ಕಡತಗಳನ್ನು ಹಂಚಿಕೆಯಾದ ಸರದಿ</td></tr>
</table>

| | | |
|---|---|---|
| | | ಸಾಲಿನಂತೆ ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಲು ಹಾಗೂ ಅಪ್‌ಲೋಡ್ ಮಾಡಿರುವ ಕಡತಗಳ ಪರಿಶೀಲನೆ ಮತ್ತು ಅನುಮೋದನೆಯನ್ನು ಸಹಾ ತಂತ್ರಾಂಶದ ಮುಖಾಂತರ ಆನ್‌ಲೈನ್‌ನಲ್ಲೇ ಸರದಿ ಸಾಲಿನಂತೆ ನಿರ್ವಹಿಸುವ ಮೂಲಕ, ಪ್ರಕರಣಗಳ ವಿಲೇವಾರಿಯಲ್ಲಿ ಯಾವುದೇ ವಿಳಂಬಕ್ಕೆ ಅವಕಾಶ ವಿಲ್ಲದಂತೆ ಕ್ರಮವಹಿಸಲಾಗುತ್ತಿದೆ.<br>2) ನಿಯಮಿತವಾಗಿ ಕಂದಾಯ ಇಲಾಖೆಯಿಂದ ಪಹಣಿ ತಿದ್ದುಪಡಿ ಕುರಿತು ಕಂದಾಯ ಅದಾಲತ್ ಗಳನ್ನು ನಡೆಸಲಾಗುತ್ತಿದೆ<br>3) ನಮೂನೆ 1 ರಿಂದ 5 ಅನ್ನು ಭರ್ತಿ ಮಾಡಲು ಅಗತ್ಯ ಸೂಚನೆ ಮತ್ತು ಮಾರ್ಗಸೂಚಿಗಳನ್ನು ನೀಡಲಾಗಿದೆ.<br>4) ಕಾಲಕಾಲಕ್ಕೆ ವಿಡಿಯೋ ಸಂವಾದ ಮತ್ತು ವಿಭಾಗವಾರು ಅಧಿಕಾರಿಗಳ ಸಭೆ ನಡೆಸಿ ಪ್ರಗತಿ ಪರಿಶೀಲನೆ ಮಾಡಿ ಹೆಚ್ಚಿನ ಪ್ರಗತಿ ಸಾಧಿಸಲು ಸೂಕ್ತ ಮಾರ್ಗದರ್ಶನ ಮತ್ತು ಅಗತ್ಯ ಸೂಚನೆ ನೀಡಲಾಗುತ್ತಿದೆ.<br>5) ಹೆಚ್ಚಿನ ಪ್ರಕರಣಗಳು ಬಾಕಿ ಇರುವ ತಾಲ್ಲೂಕುಗಳಿಗೆ ಕಡಿಮೆ ಪ್ರಕರಣಗಳು ಬಾಕಿ ಇರುವ ತಾಲ್ಲೂಕಿನಿಂದ ಭೂಮಾಪಕರನ್ನು ನಿಯೋಜನೆ ಮಾಡಿ ಪ್ರಕರಣಗಳನ್ನು ವಿಲೇಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br>6) 2072 ಪರವಾನಗಿ ಭೂಮಾಪಕರ ಆಯ್ಕೆ ಕುರಿತು ಅರ್ಜಿಗಳನ್ನು ಆಹ್ವಾನಿಸಿ, ದಿನಾಂಕ 1-2-2021 & 2-2-2021 ರಂದು ಸ್ಪರ್ಧಾತ್ಮಕ ಪರೀಕ್ಷೆಯನ್ನು ನಡೆಸಿ, ಜಿಲ್ಲಾವಾರು ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ತರಬೇತಿ ನಂತರ ಉತ್ತೀರ್ಣವಾದ 841 ಜನರಿಗೆ ಪರವಾನಗಿ ನೀಡಿ ರಾಜ್ಯದ ವಿವಿಧ ತಾಲ್ಲೂಕುಗಳಿಗೆ ನಿಯೋಜಿಸಿದ್ದು, ನಿಯೋಜಿತ ತಾಲ್ಲೂಕುಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇಲಾಖಾ ತರಬೇತಿ ಪೂರ್ಣಗೊಳಿಸಿರುವ 438 ಜನ ಪರವಾನಗಿ ಭೂಮಾಪಕರಿಗೆ ವಿವಿಧ ತಾಲ್ಲೂಕುಗಳಿಗೆ ಕೌನ್ಸಿಲಿಂಗ್ ಮೂಲಕ ಸ್ಥಳ ನಿಯೋಜನೆ ಮಾಡಲಾಗಿದೆ. ಪ್ರಸ್ತುತ 508 ಪರವಾನಗಿ ಭೂಮಾಪಕರು ತರಬೇತಿ ಪಡೆಯುತ್ತಿದ್ದು, ತರಬೇತಿ ನಂತರ ಉತ್ತೀರ್ಣರಾದವರಿಗೆ ಪರವಾನಗಿ ನೀಡಿ ರಾಜ್ಯದ ವಿವಿಧ ತಾಲ್ಲೂಕುಗಳಿಗೆ ಕಾರ್ಯ ನಿಯೋಜಿಸಲಾಗುತ್ತಿದೆ.<br>7) ಅಗತ್ಯತೆಗನುಗುಣವಾಗಿ ಹೊಸದಾಗಿ 3000 ಪರವಾನಗಿ ಭೂಮಾಪಕರನ್ನು ಆಯ್ಕೆ ಮಾಡಿಕೊಳ್ಳಲು ದಿನಾಂಕ 28-12-2021 ರಂದು ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಪ್ರವೇಶ ಪರೀಕ್ಷೆ ನಡೆಸಿ ಜಿಲ್ಲಾವಾರು ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ, ತರಬೇತಿ ನಂತರ ಉತ್ತೀರ್ಣರಾದವರಿಗೆ ಪರವಾನಗಿ ನೀಡಿ ರಾಜ್ಯದ ವಿವಿಧ ತಾಲ್ಲೂಕುಗಳಿಗೆ ಕಾರ್ಯ ನಿಯೋಜಿಸಲಾಗುತ್ತದೆ.<br>ಇದರಿಂದ ಬಾಕಿ ಪ್ರಕರಣಗಳನ್ನು ಶೀಘ್ರವಾಗಿ ವಿಲೇವಾರಿ ಮಾಡಲು ಸಾಧ್ಯವಾಗುತ್ತದೆ. |

ಈ) ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆ ಯಲ್ಲಿರುವ ಪೋಡಿ ಮುಕ್ತ ಗ್ರಾಮಗಳ ಸಂಖ್ಯೆ ಎಷ್ಟು? (ವಿವರ ನೀಡುವುದು)

**ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಯಲ್ಲಿ ಪೋಡಿ ಮುಕ್ತ ಗ್ರಾಮ ಯೋಜನೆಯಡಿ ಅಳತೆ ಕಾರ್ಯ ಪೂರ್ಣಗೊಂಡ ಗ್ರಾಮಗಳ ತಾಲ್ಲೂಕುವಾರು ವಿವರ**

| ಕ್ರ | ಜಿಲ್ಲೆ | ತಾಲ್ಲೂಕು | ಪೋಡಿ ಮುಕ್ತ ಗ್ರಾಮ ಯೋಜನೆಯಡಿ ಅಳತೆ ಕಾರ್ಯ ಪೂರ್ಣಗೊಂಡ ಗ್ರಾಮಗಳ ಸಂಖ್ಯೆ |
|---|---|---|---|
| 1 | ಬೆಂಗಳೂರು ಗ್ರಾಮಾಂತರ | ಹೊಸಕೋಟೆ | 109 |
| 2 | | ದೇವನಹಳ್ಳಿ | 113 |
| 3 | | ಡಿ.ಬಿ.ಪುರ | 290 |
| 4 | | ನೆಲಮಂಗಲ | 199 |
| | | **ಒಟ್ಟು** | **711** |
| 1 | ರಾಮನಗರ | ರಾಮನಗರ | 75 |
| 2 | | ಚನ್ನಪಟ್ಟಣ | 82 |
| 3 | | ಕನಕಪುರ | 156 |
| 4 | | ಮಾಗಡಿ | 119 |
| | | **ಒಟ್ಟು** | **432** |

**ಸಂಖ್ಯೆ: ಕಂಇ 18 ಎಸ್ಎಸ್‌ಸಿ 2022**

**(ಆರ್.ಅಶೋಕ)**
ಕಂದಾಯ ಸಚಿವರು

# ಅನುಬಂಧ

| ಜಿಲ್ಲೆ | ತಾಲ್ಲೂಕು | ಹೋಬಳಿ | ಪ್ರಾ. ಶೀಲ್ಕು | ಸ್ವೀಕೃತಿ | ಒಟ್ಟು | ವಿಲೇ | ಬಾಕಿ |
|---|---|---|---|---|---|---|---|
| ಬೆಂಗಳೂರು ಗ್ರಾಮಾಂತರ | ನೆಲಮಂಗಲ | ಸೋಂಪುರ | 175 | 620 | 795 | 593 | 202 |
| | | ಸೋಂಪುರ-2 | 13 | 67 | 80 | 59 | 21 |
| | | ತ್ಯಾಮಗೊಂಡ್ಲು | 50 | 238 | 288 | 217 | 71 |
| | | ಕಸಬಾ | 316 | 930 | 1246 | 923 | 323 |
| | | ಕಸಬಾ-2 | 26 | 87 | 113 | 80 | 33 |
| | | ತ್ಯಾಮಗೊಂಡ್ಲು-2 | 117 | 475 | 592 | 469 | 123 |
| | ದೊಡ್ಡ ಬಳ್ಳಾಪುರ | ತೂಬಗೆರೆ | 149 | 462 | 611 | 432 | 179 |
| | | ಮದುರೆ | 119 | 377 | 496 | 331 | 165 |
| | | ಸಾಸಲು | 73 | 306 | 379 | 202 | 177 |
| | | ಕಸಬಾ | 203 | 694 | 897 | 529 | 368 |
| | | ದೊಡ್ಡಬೆಳವಂಗಲ | 153 | 650 | 803 | 423 | 380 |
| | ದೇವನ ಹಳ್ಳಿ | ಚನ್ನರಾಯಪಟ್ಟಣ | 115 | 625 | 740 | 554 | 186 |
| | | ವಿಜಯಪುರ | 131 | 900 | 1031 | 678 | 353 |
| | | ಕಸಬಾ | 153 | 668 | 821 | 576 | 245 |
| | | ಕುಂದಾಣ | 145 | 821 | 966 | 692 | 274 |
| | ಹೊಸಕೋಟೆ | ಜಡಿಗೇನಹಳ್ಳಿ | 224 | 735 | 959 | 709 | 250 |
| | | ಕಸಬಾ | 283 | 916 | 1199 | 890 | 309 |
| | | ಸೂಲಿಬೆಲೆ | 154 | 727 | 881 | 581 | 300 |
| | | ಅನುಗೊಂಡನಹಳ್ಳಿ | 312 | 881 | 1193 | 885 | 308 |
| | | ನಂದಗುಡಿ | 245 | 789 | 1034 | 780 | 254 |
| | | **ಒಟ್ಟು** | **3156** | **11968** | **15124** | **10603** | **4521** |

| | | | | | | | |
|---|---|---|---|---|---|---|---|
| ರಾಮನಗರ | ಮಾಗಡಿ | ಕಸಬಾ | 270 | 1100 | 1370 | 709 | 661 |
| | | ಕುದೂರು | 214 | 850 | 1064 | 693 | 371 |
| | | ಮಾಡಬಾಳ್ | 133 | 623 | 756 | 367 | 389 |
| | | ತಿಪ್ಪಸಂದ್ರ | 108 | 595 | 703 | 452 | 251 |
| | | ಸೋಲೂರು | 208 | 886 | 1094 | 554 | 540 |
| | ರಾಮನಗರ | ಕೈಲಾಂಚ | 22 | 16 | 38 | 22 | 16 |
| | | ಕಸಬಾ1 | 84 | 248 | 332 | 218 | 114 |
| | | ಕೈಲಾಂಚ-2 | 34 | 191 | 225 | 141 | 84 |
| | | ಕಸಬಾ | 0 | 5 | 5 | 0 | 5 |
| | | ಬಿಡದಿ | 139 | 32 | 171 | 152 | 19 |
| | | ಕೈಲಾಂಚ-1 | 65 | 286 | 351 | 238 | 113 |
| | | ಕೂಟಗಲ | 143 | 465 | 608 | 380 | 228 |
| | | ಬಿಡದಿ-2 | 80 | 559 | 639 | 425 | 214 |
| | | ಕಸಬಾ2 | 33 | 109 | 142 | 91 | 51 |
| | | ಬಿಡದಿ-1 | 123 | 560 | 683 | 429 | 254 |
| | ಚನ್ನಪಟ್ಟಣ | ಮಳೂರು | 103 | 833 | 936 | 645 | 291 |
| | | ವಿರುಪಾಕ್ಷಿಪುರ | 140 | 1244 | 1384 | 876 | 508 |
| | | ಕಸಬಾ | 91 | 729 | 820 | 561 | 259 |

| | | | | | | | |
|---|---|---|---|---|---|---|---|
| | ಕನಕಪುರ | ಮರಳವಾಡಿ | 288 | 1108 | 1396 | 835 | 561 |
| | | ಉಯ್ಯಂಬಳ್ಳಿ | 186 | 566 | 752 | 508 | 244 |
| | | ಹಾರೋಹಳ್ಳಿ | 337 | 883 | 1220 | 846 | 374 |
| | | ಕೋಡಿಹಳ್ಳಿ | 189 | 622 | 811 | 514 | 297 |
| | | ಕಸಬಾ | 441 | 1712 | 2153 | 1308 | 845 |
| | | ಸಾತನೂರು | 251 | 795 | 1046 | 674 | 372 |
| **ಒಟ್ಟು** | | | **3682** | **15017** | **18699** | **11638** | **7061** |